ಅನುಬಂಧ ಅ

ಹುಣಸೂರು ತಾಲ್ಲೂಕಿನಲ್ಲಿ ಮಂಜೂರಾಗಿರುವ ಕಲ್ಲು ಗಣಿ ಹಾಗೂ ಗಣಿ ಗುತ್ತಿಗೆಗಳ ವಿವರಗಳು

ಕ್ರ.ಸಂ.	ಗುತ್ತಿಗೆದಾರರ ಹೆಸರು	ಗುತ್ತಿಗೆ ಸಂಖ್ಯೆ	ಖನಿಜ	ದಿನಾಂಕ	ವಿಸ್ತೀರ್ಣ ಮತ್ತು ಪ್ರದೇಶ
ಗಣಿ ಗುತ್ತಿಗೆಗಳು					
1.	ಕೆ. ಶ್ರೀನಿವಾಸ ರಾವ್	2249	ಮ್ಯಾಗ್ನಸೈಟ್	15-7-99	4-05 H ಕಾಮ ಗೊಂಡನಹಳ್ಳಿ
2.	ಕೆ. ಶ್ರೀನಿವಾಸರಾವ್	2250	ಮ್ಯಾಗ್ನಸೈಟ್		2-12 H ಹನಗೋಡು
3.	ಜೆ.ಡಿ. ಮಿನರಲ್ಸ್	2270	ಮ್ಯಾಗ್ನಸೈಟ್	5-5-2000	2-49 H ಆಸ್ಪತ್ರೆಕಾವಲ್
ಕಲ್ಲು ಗಣಿ ಗುತ್ತಿಗೆಗಳು					
1.	ಆರ್. ಸೋಮೇಗೌಡ	30	ಕಟ್ಟಡ ಕಲ್ಲು	3-2-01	0-20 ಎಕರೆ ಗೆರಸನಹಳ್ಳಿ
2.	ಆರ್. ಸೋಮೇಗೌಡ	60	ಕಟ್ಟಡ ಕಲ್ಲು	29-10-01	0-20 ಎಕರೆ ಗೆರಸನಹಳ್ಳಿ
3.	ಎಲ್. ಶಿವಕುಮಾರ್	47	ಕಟ್ಟಡ ಕಲ್ಲು	26-8-01	2-00 ಎಕರೆ ಬನ್ನಿಗುಪ್ಪೆ
4.	ಎಂ. ವೆಂಕಟೇಶ್	163	ಕರೀ ಕಲ್ಲು	14-8-98	ಹೈರಿಗೆ 2-00 ಎಕರೆ
5.	ಎನ್. ಚಂದ್ರಶೇಖರ್	195	ಮಲ್ಟಿಕಲ್ಲರ್	1-6-98	ಜಿಟ್ರಮಾರು 3-00 ಎಕರೆ
6.	ಎಂ.ಕೆ. ನಾಣಯ್ಯ	54	ಸಾ. ಮರಳು	6-9-99	ಹೊಸಹಳ್ಳಿ 2-00 ಎಕರೆ
7.	ಪಿ.ಸಿ. ಜಾನ್	58	ಸಾ. ಮರಳು	16-9-99	ಹೆಬ್ಬನ ಕುಪ್ಪೆ 2-00 ಎಕರೆ

ಹುಣಸೂರು ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆ ತರಬೇತಿ ಕೇಂದ್ರವನ್ನು ಖಾಸಗಿಗೆ ವಹಿಸುವುದು

2113 (2607) ಶ್ರೀ ಪಾಪಣ್ಣ ವಿ. (ಹುಣಸೂರು): ಮಾನ್ಯ ಸಣ್ಣ ಪ್ರಮಾಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಣಸೂರು ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕಾ ತರಬೇತಿ ಸಂಸ್ಥೆ ಇರುವುದು ನಿಜವಲ್ಲವೇ;

ಆ) ಈ ಸಂಸ್ಥೆ ದಿವಂಗತ ದೇವರಾಜ್ ಅರಸ್‌ರವರ ಕನಸಿನ ಸಂಸ್ಥೆಯಾಗಿದ್ದು ಉಪನ್ಯಾಸಕರು ಇಲ್ಲದೆ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;

ಇ) ಈ ತರಬೇತಿ ಸಂಸ್ಥೆಯಲ್ಲಿ ಬೆಲೆಬಾಳುವ ಉಪಕರಣಗಳಿದ್ದು, ಹೊಸ ಕಟ್ಟಡ ಅಪೂರ್ಣಗೊಂಡಿದ್ದು, ಪೂರ್ಣಗೊಳಿಸಲು ತೊಂದರೆ ಏನು;

ಈ) ಈ ಸಂಸ್ಥೆಗೆ ಸೇವಾ ಮನೋಭಾವದ ಉಪನ್ಯಾಸಕರನ್ನು ನೇಮಿಸಿಕೊಂಡು ನಡೆಸಲು ಗಾವಡಗೆರೆ ಮಠದ ವಿದ್ಯಾ ಸಂಸ್ಥೆ, ಸರ್ಕಾರಕ್ಕೆ ಮನವಿ ಸಲ್ಲಿಸಿದೆಯೆ;

ಉ) ಸ್ಥಗಿತಗೊಂಡಿರುವ ಈ ಸಂಸ್ಥೆಯನ್ನು ಕೆಲವು ಕಾಲ ಗಾವಡಗೆರೆ ಮಠದ ವಿದ್ಯಾ ಸಂಸ್ಥೆಗೆ ನೀಡಲು ತೊಂದರೆ ಏನು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣ ಕೈಗಾರಿಕೆ ಮತ್ತು ಹಜ್ ಸಚಿವರು):

ಅ) ಹೌದು.

ಆ) ಕೆಲವು ವೃತ್ತಿಗಳಲ್ಲಿ ಉಪನ್ಯಾಸಕರು ಇಲ್ಲದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ.

ಇ) ಕಟ್ಟಡದ ಅಂದಾಜು ವೆಚ್ಚ ರೂ. 15.80 ಲಕ್ಷಗಳಲ್ಲಿ ರೂ. 10.13 ಲಕ್ಷಗಳು ಬಿಡುಗಡೆಯಾಗಿದ್ದು. ಬಾಕಿ ರೂ. 5.67 ಲಕ್ಷ ಬಿಡುಗಡೆಗೆ ಕ್ರಮ ಜಾರಿಯಲ್ಲಿದೆ ಕೂಡಲೇ ಕಟ್ಟಡ ನಿರ್ಮಾಣ ಪೂರ್ಣಗೊಳಿಸಲಾಗುವುದು.

ಈ) ಸಲ್ಲಿಸಿದ್ದಾರೆ.

ಉ) ಇಲಾಖಾ ತರಬೇತಿ ಸಂಸ್ಥೆಗಳನ್ನು ಪುನರ್‌ರಚನೆಯ ಪ್ರಸ್ತಾವನೆಗೆ ದಿನಾಂಕ 10-2-2003 ರಂದು ಸರ್ಕಾರದ ಆದೇಶವಾಗಿದ್ದು ಅದರಂತೆ ಜಿಲ್ಲಾ ಕೈಗಾರಿಕಾ ತರಬೇತಿ ಕೇಂದ್ರವನ್ನು ಕುಶಲಕರ್ಮಿ ತರಬೇತಿ ಸಂಸ್ಥೆ, ಹುಣಸೂರು ಎಂದು ಮುಂದುವರಿಸಿ ಅಭಿವೃದ್ಧಿಪಡಿಸಲಾಗುವುದು. ಆದ್ದರಿಂದ ನೀಡಲು ಸಾಧ್ಯವಾಗುವುದಿಲ್ಲ.

ಹುಣಸೂರು ತಾಲ್ಲೂಕಿನಲ್ಲಿ ಮೀನುಗಾರಿಕೆ ವ್ಯವಸಾಯ ಸಹಕಾರ ಸಂಘಕ್ಕೆ ಮನೆಗಳ ಬೇಡಿಕೆ

2114 (2608) ಶ್ರೀ ಪಾಪಣ್ಣ ವಿ. (ಹುಣಸೂರು): ಮಾನ್ಯ ಮೀನು ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅತಿ ಹೆಚ್ಚು ಕೆರೆಗಳಿರುವ ಹುಣಸೂರು ತಾಲ್ಲೂಕಿನಲ್ಲಿ ಮೀನು ಹಿಡಿಯುವವರ ಸಂಖ್ಯೆ ಹೆಚ್ಚಿಗಿರುವುದು ನಿಜವಲ್ಲವೇ;

ಆ) ಹಾಗಿದ್ದಲ್ಲಿ ಈ ಕ್ಷೇತ್ರಕ್ಕೆ ಅತಿ ಕಡಿಮೆ ಮನೆಗಳನ್ನು ಕೊಟ್ಟು ತಾರತಮ್ಯ ಮಾಡಿರುವುದನ್ನು ಸರಿಪಡಿಸಲಾಗುವುದೇ;

ಇ) ಹುಣಸೂರು ತಾಲ್ಲೂಕಿನಲ್ಲಿ ಹೈರಿಗೆ ಕೆರೆ ಯಾರು ಗುತ್ತಿಗೆಗೆ ಪಡೆದಿದ್ದಾರೆ;

ಈ) ಈ ಹೈರಿಗೆ ಕೆರೆಯನ್ನು ಅನಧಿಕೃತವಾಗಿ ಕೆಲವು ಕಾಲ ಉಪಯೋಗಿಸಿಕೊಂಡಿದ್ದವರ ಮೇಲೆ ಕೈಗೊಂಡಿರುವ ಕ್ರಮವೇನು;

ಉ) ರತ್ನಪುರಿ ಮೀನು ಬಳಕೆದಾರರ ಸಂಘದಲ್ಲಿ ಆಗಿರುವ ದುರುಪಯೋಗದ ಬಗ್ಗೆ ಕೈಗೊಂಡಿರುವ ಕ್ರಮ ಏನು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):

ಅ) ನಿಜವಲ್ಲ.

ಆ) ತಾರತಮ್ಯ ಮಾಡಿರುವುದಿಲ್ಲ. 1987-88 ರಿಂದ ಈವರೆಗೆ 180 ಮನೆಗಳನ್ನು ಮಂಜೂರು ಮಾಡಲಾಗಿದೆ.